e ಜೀವನ

# ಅಂಚೆ ಮೂಲಕ ಭಾರತದಲ್ಲಿ ಇ-ಕ್ರಾಂತಿ

ಸಾಮಾನ್ಯ ಜನಜೀವನದ ಮೇಲೆ ಪ್ರಭಾವ ಬೀರುವ ತಂತ್ರಜ್ಞಾನವೇ ನಿಜವಾದ ಯಶಸ್ವೀ ತಂತ್ರಜ್ಞಾನ. ಆರ್ಥಿಕವಾಗಿ ಮುಂದಿರುವ ಸಮಾಜದ ಕೆಲವೇ ಮಂದಿಗೆ ಹೊಸ ತಂತ್ರಜ್ಞಾನಗಳು ಲಭ್ಯವಾದಲ್ಲಿ ಅದು ನಿರುಪಯೋಗಿಯೇ ಸರಿ. ಇಂದಿನ ಅನೇಕ ತಂತ್ರಜ್ಞಾನಗಳು ಈ ಗುಂಪಿಗೆ ಸೇರಿದವುಗಳಾಗಿವೆ.

ಇಂತಹ ಹೊಸ ತಂತ್ರಜ್ಞಾನಗಳನ್ನು ಜನಸಾಮಾನ್ಯರಿಗೆ ತಲುಪುವಂತೆ ಮಾಡುವಲ್ಲಿ ಸರ್ಕಾರ ಮತ್ತು ದೊಡ್ಡ ಸಾರ್ವಜನಿಕ ಸಂಸ್ಥೆಗಳ ಪಾತ್ರ ಹಿರಿದು. ಈ ನಿಟ್ಟಿನಲ್ಲಿ ಭಾರತೀಯ ಅಂಚೆ ಇಲಾಖೆ ಒಂದು ತ್ರಿವಿಕ್ರಮ ಹೆಜ್ಜೆಯನ್ನೇ ಇಟ್ಟಿದೆ. ಮಿಂಚಿನ ವೇಗದಲ್ಲಿ ಪ್ರಪಂಚದ ಯಾವುದೇ ಭಾಗಕ್ಕೆ ಸುದ್ದಿಯನ್ನು ಮುಟ್ಟಿಸಬಲ್ಲ ಇ-ಮೇಲ್ ತಂತ್ರಜ್ಞಾನದ ಪ್ರಭಾವವನ್ನು ಬಳಸಿಕೊಂಡು ಪತ್ರ ರವಾನೆ ಮಾಡುವ ಇ-ಪೋಸ್ಟ್ ಎಂಬ ಹೊಸ ಯೋಜನೆಯನ್ನು ಅದು ಕಾರ್ಯರೂಪಕ್ಕೆ ತಂದಿದೆ.

ಭಾರತೀಯ ಅಂಚೆ, ವಿಶ್ವದ ಅತಿ ದೊಡ್ಡ ಅಂಚೆ ಇಲಾಖೆಗಳಲ್ಲಿ ಒಂದು. 1,54,149 ಅಂಚೆ ಕಛೇರಿಗಳು, 5,64,710 ಅಂಚೆ ಪೆಟ್ಟಿಗೆಗಳನ್ನು ಹೊಂದಿರುವ ಭಾರತೀಯ ಅಂಚೆ, 1,575 ಕೋಟಿ ಪತ್ರಗಳನ್ನು ಪ್ರತಿ ವರ್ಷ ದೇಶದ ಎಲ್ಲ ಮೂಲೆಗಳಿಗೆ ರವಾನಿಸುತ್ತದೆ. ಇಂತಹ ಬೃಹತ್ ಅಂಚೆ ಜಾಲವನ್ನು ಹೊಂದಿರುವ ಭಾರತೀಯ ಅಂಚೆ ಇಲಾಖೆ, ತಂತ್ರಜ್ಞಾನವನ್ನು ಬಳಸಿ ತನ್ನ ಕಾರ್ಯವೈಖರಿಯನ್ನು ಆಧುನೀಕರಿಸಲು ನಿರ್ಧರಿಸಿದರೆ ಏನಾಗಬಹುದು? ಸುಧಾರಿತ ಸೇವೆ ಮತ್ತು ಹೆಚ್ಚಿನ ಗ್ರಾಹಕ ತೃಪ್ತಿ. ಆಗಸ್ಟ್ 11, 2001ರಂದು ಇ-ಪೋಸ್ಟ್ ಸೇವೆಯನ್ನು ಪ್ರಾರಂಭಿಸಿದಾಗ ಆದದ್ದು ಇದೇ.

ಇ-ಮೇಲ್‌ನ ವ್ಯಾಪಕ ಜನಪ್ರಿಯತೆಯ ಲಾಭವನ್ನು ಬಳಸಿಕೊಳ್ಳುವ ಇ-ಪೋಸ್ಟ್ ಒಂದು ಕ್ರಾಂತಿಕಾರಿ ಸೇವೆ. ಇದರ ಮೂಲಕ ಉದಾಹರಣೆಗೆ, ಲಂಡನ್‌ನ ವ್ಯಕ್ತಿಯೋರ್ವ ಭಾರತದ ಯಾವುದೋ ಮೂಲೆಯಲ್ಲಿರುವ ಹಳ್ಳಿಯೊಂದರಲ್ಲಿ ವಾಸವಾಗಿರುವ ತನ್ನ ಪರಿವಾರದವರಿಗೆ ಪತ್ರ ಬರೆಯಬೇಕೆಂದಿದ್ದರೆ, ತನ್ನ ಕಂಪ್ಯೂಟರ್ ಮುಂದೆ ಕುಳಿತು ಇ-ಮೇಲ್ ಕಳಿಸಿದರೆ ಸಾಕು. ಕೆಲವೇ ಗಂಟೆಗಳಲ್ಲಿ ಇದು ಸಾಮಾನ್ಯ ಪತ್ರದ ರೂಪದಲ್ಲಿ ಪೋಸ್ಟ್‌ಮ್ಯಾನ್ ಮೂಲಕ ತನ್ನ ಪರಿವಾರದವರ ಕೈ ಸೇರುತ್ತದೆ. ಇದು ಹೇಗೆ ಕೆಲಸ ಮಾಡುತ್ತದೆಂದರೆ, ಲಂಡನ್‌ನಲ್ಲಿರುವ ವ್ಯಕ್ತಿ ಕಳುಹಿಸಿದ ಇ-ಮೇಲ್ ಭಾರತದಲ್ಲಿರುವ ಆ ಹಳ್ಳಿಗೆ ಸಮೀಪದಲ್ಲಿರುವ ಇ-ಪೋಸ್ಟ್ ಕೇಂದ್ರವೊಂದನ್ನು ಕೆಲವೇ ಕ್ಷಣಗಳಲ್ಲಿ ತಲುಪುತ್ತದೆ. ಅಲ್ಲಿಂದ ಮುಂದೆ ಬೇರೆಲ್ಲ ಸಾಮಾನ್ಯ ಪತ್ರಗಳಂತೆ ನಿರ್ದಿಷ್ಟ ವಿಳಾಸವನ್ನು ಕೆಲವೇ ಗಂಟೆಗಳಲ್ಲಿ ತಲುಪುತ್ತದೆ.

ಈ ಸೇವೆಯನ್ನು ಪ್ರಯೋಗಾರ್ಥವಾಗಿ ದೇಶದ 5 ರಾಜ್ಯಗಳಾದ - ಆಂಧ್ರಪ್ರದೇಶ, ಗುಜರಾತ್, ಮಹಾರಾಷ್ಟ್ರ, ಕೇರಳ ಮತ್ತು ಗೋವಾಗಳಲ್ಲಿ ಪ್ರಾರಂಭಿಸಲಾಗಿದೆ. ಸದ್ಯಕ್ಕೆ ದೇಶದಾದ್ಯಂತ 2,000ಕ್ಕಿಂತ ಹೆಚ್ಚು ಇ-ಪೋಸ್ಟ್ ಕೇಂದ್ರಗಳು ಮತ್ತು 5,000 ವಿತರಣಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಈ ಸೇವೆಯ ಉಪಯೋಗ ಪಡೆಯಲು ನೀವು ಮಾಡಬೇಕಾದುದಿಷ್ಟೆ. www.indiapost.org ಸೈಟಿನ ಮೂಲಕ ಇ-ಪೋಸ್ಟ್ ಖಾತೆಯೊಂದನ್ನು ತೆರೆಯಬೇಕು. ಇ-ಪೋಸ್ಟ್ ಖಾತೆಯನ್ನು ತೆರೆಯಲು 250 ರೂ.ಗಳ ಕನಿಷ್ಠ ಮೊತ್ತವನ್ನು ಪಾವತಿ ಮಾಡಿ ಕ್ರೆಡಿಟ್ ಕಾರ್ಡ್ ಅಥವಾ ರೂ. 250, 500, 2,000, 5,000 ಮತ್ತು 10,000ದ ಮುಂಗಡ-ಪಾವತಿ (prepaid) ಪ್ರತ್ಯೇಕ ಇ-ಪೋಸ್ಟ್ ಕಾರ್ಡುಗಳನ್ನು ಪಡೆದು ಸೇವೆಯ ಲಾಭ ಪಡೆಯಬಹುದು. ಇ-ಪೋಸ್ಟ್ ಮೂಲಕ ಪತ್ರಗಳನ್ನು ಕಳುಹಿಸಲಿಚ್ಛಿಸುವವರು ಸಂಬಂಧಪಟ್ಟ ಅಂಚೆ ಕಚೇರಿಯ ಪಿನ್ ಕೋಡ್‌ನ್ನೊಳಗೊಂಡ ಇ-ಮೇಲ್ ವಿಳಾಸಕ್ಕೆ ಕಳುಹಿಸಬೇಕಾಗುತ್ತದೆ. ಉದಾಹರಣೆಗೆ, ಮುಂಬೈ-1ರಲ್ಲಿರುವ ಯಾರಿಗಾದರೂ ಇ-ಮೇಲ್ ಕಳುಹಿಸಬೇಕೆಂದಿದ್ದರೆ e-Post400001@indiapostoffice.net ವಿಳಾಸಕ್ಕೆ ಕಳುಹಿಸಿದರೆ ಸಾಕು, ಅದು ನಿಮ್ಮ ಅಂಚೆ ವಿಳಾಸಕ್ಕೆ ತಲುಪಿದಂತೆಯೇ ಸರಿ.

ಇ-ಪೋಸ್ಟ್ ಜನಸಾಮಾನ್ಯರಿಗೆ ಒಂದು ಉಪಯೋಗಿ ಸೇವೆಯಾಗಿದ್ದರೂ, ಇದಕ್ಕೆ ತಗಲುವ ವೆಚ್ಚ ಮಾತ್ರ ಸದ್ಯಕ್ಕೆ ದುಬಾರಿಯಾಗಿದೆ. ಮೂರು ವಿಧಾನಗಳಲ್ಲಿ ಇ-ಪೋಸ್ಟ್ ಕಳುಹಿಸಬಹುದಾಗಿದೆ. ಸಾಮಾನ್ಯ ಮೇಲ್‌ಗೆ ರೂ. 10, ಪ್ರೀಮಿಯಂ ಮೇಲ್‌ಗೆ ರೂ. 15 ಮತ್ತು ಪ್ರತ್ಯೇಕ ದೂತರ ಮೂಲಕ ವಿಶೇಷ ಅಂಚೆ ರವಾನಿಸಲು ರೂ. 20 ಎಂದು ನಿಗದಿಸಲಾಗಿದೆ. ಇದು ಇ-ಪೋಸ್ಟ್‌ನ ವ್ಯಾಪಕ ಬಳಕೆಗೆ ಬಹುದೊಡ್ಡ ಅಡಚಣೆಯಾಗಲಿದೆ.

ಹೈದರಾಬಾದಿನ ನೆಟ್ ಲಿಂಕ್ಸ್ ಸಂಸ್ಥೆ ಕಾರ್ಯರೂಪಕ್ಕೆ ತಂದಿರುವ ಈ ಯೋಜನೆಗೆ ಕ್ಲೈಂಟ್ ಸರ್ವರ್ ಕಂಪ್ಯೂಟರ್ ಜಾಲವನ್ನು ಬಳಸಲಾಗಿದೆ. ದತ್ತನಿರ್ವಹಣೆಗೆ ಆರೇಕಲ್ 8i ಅನ್ನು ಉಪಯೋಗಿಸಿದ್ದರೆ ಅಂತರ್ಜಾಲ ಮುಖೇನ ಹಣ ಪಾವತಿಗೆ ICICIನ ಪೇಮೆಂಟ್ ಗೇಟ್ವೇಯನ್ನು ಉಪಯೋಗಿಸಲಾಗಿದೆ. ಈ ಸೇವೆಯ ಪ್ರಯೋಜನವನ್ನು ವಿಶೇಷವಾಗಿ ಮಧ್ಯ-ಪೂರ್ವ ಪ್ರದೇಶಗಳಲ್ಲಿರುವ ಭಾರತೀಯರು ಈಗ ಪಡೆಯುತ್ತಿದ್ದಾರೆ. ಡಿಸೆಂಬರ್ ತಿಂಗಳೊಳಗೆ ಈ ಸೇವೆಯನ್ನು ಎಲ್ಲ ರಾಜ್ಯಗಳಿಗೂ ವಿಸ್ತರಿಸುವ ಗುರಿಯನ್ನು ಅಂಚೆ ಇಲಾಖೆ ಇಟ್ಟುಕೊಂಡಿದೆ. 11 ವಿವಿಧ ಭಾಷೆಗಳಲ್ಲಿ ಪತ್ರ ಕಳುಹಿಸುವಂತೆ ಮಾಡಲು ಈಗ ಇ-ಪೋಸ್ಟನ್ನು ಸಜ್ಜುಗೊಳಿಸಲಾಗುತ್ತಿದೆ. ಗ್ರೀಟಿಂಗ್-ಪೋಸ್ಟ್, ಬಿಲ್-ಪೋಸ್ಟ್ ಹಾಗೂ ಇನ್ನೂ ಅನೇಕ ಹೊಸ ಸೇವೆಗಳನ್ನು ನೀಡಲು ಯೋಜಿಸಲಾಗಿದೆ. ಭಾರತೀಯ ಅಂಚೆಯ ಈ ಪ್ರಯತ್ನ ಶ್ಲಾಘನೀಯವಾದರೂ, ಅದನ್ನು ಜನಸಾಮಾನ್ಯರ ಕೈಗೆಟುಕುವ ದರದಲ್ಲಿ ನೀಡಿದರೆ ಮಾತ್ರ ಅದರ ನಿಜವಾದ ಉಪಯುಕ್ತತೆ ದೊರಕಲು ಸಾಧ್ಯ.

ಜೆ.ಪಿ. ವಿನಯಬಾಬು